Presented on : 23-06-2025
Registered on : 23-06-2025
Decided on : 19-06-2026
Duration : 11 months, 27 days.

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಜೇವರಗಿ.**

**ದಿನಾಂಕ : 19 ನೇ ಜೂನ್ ಮಾಹೆಯ 2026.**

ಉಪಸ್ಥಿತರು: ಶ್ರೀಮತಿ ತಯ್ಯಬಾ ಸುಲ್ತಾನಾ. ಬಿ.ಎ.ಎಲ್.ಎಲ್.ಬಿ,
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಜೇವರಗಿ.

## ಅಪರಾಧಿಕ ಪ್ರಕರಣ ಸಂಖ್ಯೆ: 73/2025

ಫಿರ್ಯಾಧಿದಾರರು:

ರಾಜ್ಯ ಸರ್ಕಾರದ ಪರ ಜೇವರಗಿ ಪೊಲೀಸರು,
ಜೇವರಗಿ ಪೊಲೀಸ ಠಾಣೆ,

(ಪರ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರು:

1. ಕುಮಾರ ತಂದೆ ಬಸಪ್ಪ ಖವಲ್ದಾರ,
   ವಯಸ್ಸು: 25 ವರ್ಷ, ಉ: ಕೂಲಿ ಕೆಲಸ,
   ವಾಸ: ಹಾಲಗಡ್ಲಾ, ತಾ: ಜೇವರ್ಗಿ,
   ಜಿ: ಕಲಬುರಗಿ.

2. ಏಕಲವ್ಯ ತಂದೆ ದೇವಿಂದ್ರಪ್ಪ ಹೊಸಮನಿ,
   ವಯಸ್ಸು: 23 ವರ್ಷ, ಉ: ಕೂಲಿ ಕೆಲಸ,
   ವಾಸ: ಹಾಲಗಡ್ಲಾ, ತಾ: ಜೇವರ್ಗಿ,
   ಜಿ: ಕಲಬುರಗಿ.

(ಆರೋಪಿತರ ಪರ ಶ್ರೀ ಬಿ. ಬಿ. ಬಿ., ವಕೀಲರು)

**ತೀರ್ಪು**

1. ಜೇವರಗಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರವರು ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಕಲಂ.115(2), 74, 78, 79, 351(2) ಸಹ ಕಲಂ.3(5) ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇದೆ:**

ಜೇವರ್ಗಿ ಪೊಲೀಸ್ ಠಾಣೆಯ ಹದ್ದಿಯ ಪೈಕಿ ಹಾಲಗಡ್ಲಾ ಗ್ರಾಮದಲ್ಲಿ ದಿನಾಂಕ 01-12-2024 ರಂದು 01.00 ಪಿ.ಎಮ್. ಕ್ಕೆ ಚಾಸಾ.1 ನೇದ್ದವಳು ಅಗಸಿ ಹತ್ತಿರ ಇರುವ ತಮ್ಮ ಹೊಟೇಲ್‌ನಲ್ಲಿ ಕೆಲಸ ಮುಗಿಸಿಕೊಂಡು, ತಮ್ಮ ಮನೆ ಕಡೆಗೆ ಯಲ್ಲಪ್ಪ ಹಡಪದರವರ ಖಾಲಿ ಜಾಗೆಯ ಹತ್ತಿರ ರೋಡಿನಲ್ಲಿ ಹೋಗುತ್ತಿರುವಾಗ, 1 ನೇ ಆರೋಪಿಯು ಮಲ್ಲಯ್ಯ ದೇವರ ಕಟ್ಟೆಯ ಹತ್ತಿರ ನಿಂತುಕೊಂಡು ಪಿರ್ಯಾದಿ ಚಾಸಾ.1 ನೇದ್ದವಳಿಗೆ ನೋಡಿ ಸಿಳ್ಳೆ ಹೊಡೆಯುವುದು, ಕೈ ಸನ್ನೆ ಮಾಡಿ ಕರೆಯುವುದು ಮತ್ತು ಕಣ್ಣು ಹೊಡೆಯುವುದು ಮಾಡುತ್ತಿದ್ದಾಗ, ಚಾಸಾ.1 ನೇದ್ದವಳು, 1 ನೇ ಆರೋಪಿಗೆ ನೋಡಿಯು ನೋಡದಂತೆ, ತನ್ನ ಮನೆಯ ಕಡೆಗೆ ರಸ್ತೆಯಲ್ಲಿ ಹೋಗುತ್ತಿದ್ದಾಗ, 1 ನೇ ಆರೋಪಿಯು ಚಾಸಾ.1 ನೇದ್ದವಳ ಹಿಂದೆನೆ ಬೆನ್ನು ಹತ್ತಿ ಹೋಗಿ, ಚಾಸಾ.1 ನೇದ್ದವಳ ಹೆಸರು ಕೂಗಿ ನಿಲ್ಲು ನಿನ್ನ ಜೊತೆ ಮಾತನಾಡುವುದು ಇದೆ ಎಂದು ಚೀರಿ ಹೇಳುತ್ತಿದ್ದಾಗ, ಚಾಸಾ.1 ನೇದ್ದವಳು ಹಾಗೆ ಮುಂದೆ ಮುಂದೆ ಹೋಗುತ್ತಿದ್ದಾಗ, 1 ನೇ ಆರೋಪಿಯು ಅವಳ ಹಿಂದೆನೆ ಹೋಗಿ, ಚಾಸಾ.1 ನೇದ್ದವಳ ಕೈ ಹಿಡಿದು ಜಗ್ಗಿ, ಕೈಯಿಂದ ಕಪಾಳಕ್ಕೆ ಹೊಡೆದು, ಅಲ್ಲಿಯೇ ರೋಡಿನ ಪಕ್ಕದ ಕಂಟಿಯ ಕಡೆಗೆ ದರ ದರನೆ ಎಳೆದುಕೊಂಡು ಹೋಗುವಾಗ,

ಚಾಸಾ.1 ನೇದ್ದವಳು ಚೀರಾಡಿದ್ದು, ರೋಡಿನಲ್ಲಿ ವಾಹನಗಳು ಬರುವುದು ನೋಡಿ 1 ನೇ ಆರೋಪಿಯು ಚಾಸಾ.1 ನೇದ್ದವಳಿಗೆ ಬಿಟ್ಟು ಹೋಗಿದ್ದು, 1 ನೇ ಆರೋಪಿಯು ಅಲ್ಲಿಂದ ಹೋಗುವಾಗ, ಚಾಸಾ.1 ನೇದ್ದವಳಿಗೆ, ಈ ವಿಷಯ ಮನೆಯಲ್ಲಿ ಹೇಳಿದರೆ ಚಾಸಾ.1 ಮತ್ತು ಅವರ ಮನೆಯವರಿಗೆ ಹೊಡೆದು ಖಲಾಸ್ ಮಾಡುವುದಾಗಿ ಜೀವದ ಬೇದರಿಕೆ ಹಾಕಿ ಓಡಿ ಹೋಗಿರುತ್ತಾನೆ. ಅಲ್ಲದೇ ಈ ಮುಂಚೆ ಒಂದು ವಾರದ ಹಿಂದೆ ಚಾಸಾ.1 ರವರು ಹೋಟೆಲನಿಂದ ಮನೆ ಕಡೆಗೆ ಹೋಗುವಾಗ 1 ನೇ ಆರೋಪಿಯ ಗೆಳೆಯನಾದ 2 ನೇ ಆರೋಪಿಯು ಪಿರ್ಯಾದಿ ಚಾಸಾ.1 ನೇದ್ದವಳ ಹಿಂದೆ ಹಿಂದೆ ಹೋಗಿ, ಚಾಸಾ.1 ನೇದ್ದವಳಿಗೆ ನಿನ್ನ ಮೊಬೈಲ್ ನಂಬರ್ ಕೊಡು, ಕುಮಾರ ನಿನ್ನ ಜೊತೆ ಮಾತನಾಡುತ್ತಾನೆ ಎಂದು ಹೇಳಿ ಚಾಸಾ.1 ನೇದ್ದವಳಿಗೆ ತೊಂದರೆ ಕೊಟ್ಟಿರುವುದು ಇರುತ್ತದೆ. ಕಾರಣ ಭಾರತೀಯ ನ್ಯಾಯ ಸಂಹಿತಾ ಕಲಂ.115(2), 74, 78, 79, 351(2) ಸಹ ಕಲಂ.3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಚಾಸಾ.1 ರವರು ಆರೋಪಿತರ ವಿರುದ್ಧ ನೀಡಿದ ಫಿರ್ಯಾದಿ ಅನ್ವಯ ಜೇವರಗಿ ಪೊಲೀಸರು ತನಿಖೆಯನ್ನು ಕೈಗೊಂಡು ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣಾ ಪತ್ರವನ್ನು ಪರಿಶೀಲಿಸಿ ನ್ಯಾಯಾಲಯವು ಆರೋಪಿತರ ವಿರುದ್ಧ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡು ಆರೋಪಿತರ ಹಾಜರಾತಿ ಪಡೆದು, ದೋಷಾರೋಪಣ ಪತ್ರದ ನಕಲನ್ನು ಆರೋಪಿತರಿಗೆ ಒದಗಿಸಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 230 ರ ಷರತ್ತನ್ನು ಪಾಲನೆ ಮಾಡಿ, ಆಪಾದನೆಗಳನ್ನು ರಚಿಸಿ ಓದಿ ಹೇಳಿದಾಗ, ಆರೋಪಿತರು ತಾವು ತಪ್ಪು ಮಾಡಿರುವುದಿಲ್ಲ

ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

4. ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವ ಅಪರಾಧವನ್ನು ಆರೋಪಿತರು ಮಾಡಿರುತ್ತಾರೆಂದು ಸಾಬೀತುಪಡಿಸಲು ಅಭಿಯೋಜನೆಯು ಒಟ್ಟು 9 ಜನ ಸಾಕ್ಷಿದಾರರಲ್ಲಿ ಒಂದು ಸಾಕ್ಷಿಯನ್ನು ಫ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿ, ಎರಡು ದಾಖಲೆಯನ್ನು ನಿಪಿ.1 ಮತ್ತು ನಿಪಿ.2 ಎಂದು ನಿಶಾನೆಕರಿಸಿಕೊಂಡಿದೆ.

5. ಅಪರಾಧಿಕ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ.351 ರ ಅಡಿಯಲ್ಲಿ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯ ಇಲ್ಲದ ಕಾರಣ ಅವರ ಹೇಳಿಕೆಗಳನ್ನು ವಿನಾಯತಿಗೊಳಿಸಿದೆ.

6. ಉಭಯ ಪಕ್ಷಗಾರರ ವಾದ ವಿವಾದಗಳನ್ನು ಆಲಿಸಲಾಯಿತು ಮತ್ತು ಕಡತಗಳನ್ನು ಪರಿಶೀಲಿಸಲಾಯಿತು.

7. ಈ ಮೇಲಿನ ಮೊಕದ್ದಮೆಯಲ್ಲಿ ನ್ಯಾಯಾಲಯವು ತೀರ್ಮಾನಿಸಬೇಕಾದ ಅಂಶಗಳು ಈ ಕೆಳಕಂಡಂತಿದೆ.

**<u>ಅಂಶಗಳು</u>**

1. ದಿನಾಂಕ 01-12-2024 ರಂದು ಮಧ್ಯಾಹ್ನ 01.00 ಗಂಟೆ ಸುಮಾರಿಗೆ ಜೇವರ್ಗಿ ಪೊಲೀಸ ಠಾಣಾ ವ್ಯಾಪ್ತಿಯ ಹಾಲಗಡ್ಲಾ ಗ್ರಾಮದ ಯಲ್ಲಪ್ಪ ಹಡಪದರವರ ಖಾಲಿ ಜಾಗದ ಹತ್ತಿರ ರಸ್ತೆಯಲ್ಲಿ ಚಾಸಾ-1 ರವರು

ಹೋಗುತ್ತಿದ್ದಾಗ ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಬಂದು 1 ನೇ ಆರೋಪಿಯು ಚಾಸಾ.1 ರವರ ಬೆನ್ನು ಹತ್ತಿ ಚಾಸಾ.1 ರವರ ಹೆಸರು ಕೂಗಿ ನಿಲ್ಲು ನಿನ್ನ ಜೊತೆ ಮಾತನಾಡುವುದು ಇದೆ ಎಂದು ಇದಕ್ಕೆ ಚಾಸಾ.1 ರವರು ವಿರೋಧ ಇದ್ದರೂ ಚಾಸಾ.1 ರವರ ಹಿಂದೆ ಹೋಗಿ ಅವಳ ಕೈ ಹಿಡಿದು ರಸ್ತೆಯ ಪಕ್ಕದ ಕಂಟಿಯ ಕಡೆಗೆ ದರ ದರ ಎಳೆದುಕೊಂಡು ಹೋಗಿದ್ದು ಹಾಗೂ 2 ನೇ ಆರೋಪಿಯು ಚಾಸಾ.1 ರವರನ್ನು ಹಿಂಬಾಲಿಸಿ ಚಾಸಾ.1 ರವರಿಗೆ ನಿನ್ನ ಮೊಬೈಲ್ ನಂಬರ್ ಕೊಡು ಕುಮಾರ(1 ನೇ ಆರೋಪಿ) ನಿನ್ನ ಜೊತೆ ಮಾತನಾಡುತ್ತಾನೆ ಎಂದು ಹೇಳಿದ ಕಾರಣ ಭಾರತೀಯ ನ್ಯಾಯ ಸಂಹಿತಾ ಕಲಂ.78 ಸಹವಾಚಕ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

2. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಮೇಲೆ ಹೇಳಿದ ವಿಚಾರವಾಗಿ ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಬಂದು, 1 ನೇ ಆರೋಪಿಯು ಹಾಲಗಡ್ಲಾ ಗ್ರಾಮದ ಮಲ್ಲಯ್ಯ ದೇವರ ಕಟ್ಟೆಯ ಹತ್ತಿರ ನಿಂತುಕೊಂಡು ಚಾಸಾ.1 ರವರಿಗೆ ಕೈ ಸನ್ನೆ ಮಾಡುವುದು ಸಿಳ್ಳೆ ಹೊಡೆಯುವುದು ಮಾಡಿ ಚಾಸಾ.1 ರವರನ್ನು ಅವಮಾನಿಸುವ ಉದ್ದೇಶದಿಂದ ಚಾಸಾ.1 ರವರ ನಮ್ರತೆಗೆ ಧಕ್ಕೆ ಉಂಟು ಮಾಡಿದ ಕಾರಣ ಭಾರತೀಯ ನ್ಯಾಯ ಸಂಹಿತಾ ಕಲಂ.79 ಸಹವಾಚಕ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ

ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

3. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಮೇಲೆ ಹೇಳಿದ ವಿಚಾರವಾಗಿ, ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಬಂದು 1 ನೇ ಆರೋಪಿಯು ಚಾಸಾ.1 ರವರ ಕೈ ಹಿಡಿದು ಜಗ್ಗಿ ಚಾಸಾ.1 ರವರ ಹೆಣ್ಣುತನಕ್ಕೆ ಅಗೌರವ ತೋರಿಸಿ ಚಾಸಾ.1 ರವರ ಮೇಲೆ ಅಪರಾಧಿಕ ಬಲಪ್ರಯೋಗವನ್ನುಂಟು ಮಾಡಿದ ಕಾರಣ ಭಾರತೀಯ ನ್ಯಾಯ ಸಂಹಿತಾ ಕಲಂ.74 ಸಹವಾಚಕ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

4. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಮೇಲೆ ಹೇಳಿದ ವಿಚಾರವಾಗಿ, ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಬಂದು 1 ನೇ ಆರೋಪಿಯು ಕೈಯಿಂದ ಚಾಸಾ.1 ರವರ ಕಪಾಳಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ ಭಾರತೀಯ ನ್ಯಾಯ ಸಂಹಿತಾ ಕಲಂ.115(2) ಸಹವಾಚಕ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

5. ಮೇಲೆ ತಿಳಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಅಪರಾಧ ಎಸಗುವ ಸಮಾನ

ಉದ್ದೇಶದಿಂದ ಬಂದು 1ನೇ ಆರೋಪಿಯು ಚಾಸಾ.1 ರವರಿಗೆ ಮನೆಯಲ್ಲಿ ಹೇಳಿದರೆ ಹೊಡೆದು ಖಲಾಸ್ ಮಾಡುವುದಾಗಿ ಜೀವದ ಬೆದರಿಕೆ ಹಾಕಿದ ಕಾರಣ ಭಾರತೀಯ ನ್ಯಾಯ ಸಂಹಿತಾ ಕಲಂ.351(2) ಸಹವಾಚಕ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

6. ಯಾವ ಆದೇಶ?

8. ಮೇಲೆ ಹೇಳಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| ಅಂಶ 1 | : | ನಕಾರಾತ್ಮಕ |
| ಅಂಶ 2 | : | ನಕಾರಾತ್ಮಕ |
| ಅಂಶ 3 | : | ನಕಾರಾತ್ಮಕ |
| ಅಂಶ 4 | : | ನಕಾರಾತ್ಮಕ |
| ಅಂಶ 5 | : | ನಕಾರಾತ್ಮಕ |
| ಅಂಶ 6 | : | ಅಂತಿಮ ಆದೇಶ<br>ಈ ಕೆಳಕಂಡಂತೆ ಕಾರಣಗಳು. |

**:<u>ಕಾರಣಗಳು</u>:**

9. **<u>ಅಂಶ-1 ರಿಂದ 5:</u>** ಈ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿದ್ದು ಸಂದರ್ಭ ಮತ್ತು ಸನ್ನಿವೇಶಗಳನ್ನು ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಯಿತು.

10. ಅಭಿಯೋಜನೆಯ ಪ್ರಕಾರ ಜೇವರ್ಗಿ ಪೊಲೀಸ್ ಠಾಣೆಯ ಹದ್ದಿಯ ಪೈಕಿ ಹಾಲಗಡ್ಲಾ

ಗ್ರಾಮದಲ್ಲಿ ದಿನಾಂಕ 01-12-2024 ರಂದು 01.00 ಪಿ.ಎಮ್.ಕ್ಕೆ ಚಾಸಾ.1 ನೇದ್ದವಳು ಅಗಸಿ ಹತ್ತಿರ ಇರುವ ತಮ್ಮ ಹೋಟೆಲ್‌ದಲ್ಲಿ ಕೆಲಸ ಮುಗಿಸಿಕೊಂಡು, ತಮ್ಮ ಮನೆ ಕಡೆಗೆ ಯಲ್ಲಪ್ಪ ಹಡಪದರವರ ಖಾಲಿ ಜಾಗೆಯ ಹತ್ತಿರ ರೊಡಿನಲ್ಲಿ ಹೋಗುತ್ತಿರುವಾಗ, 1 ನೇ ಆರೋಪಿಯು ಮಲ್ಲಯ್ಯ ದೇವರ ಕಟ್ಟೆಯ ಹತ್ತಿರ ನಿಂತುಕೊಂಡು ಪಿರ್ಯಾದಿ ಚಾಸಾ.1 ನೇದ್ದವಳಿಗೆ ನೋಡಿ ಸಿಳ್ಳೆ ಹೊಡೆಯುವುದು, ಕೈ ಸನ್ನೆ ಮಾಡಿ ಕರೆಯುವುದು ಮತ್ತು ಕಣ್ಣು ಹೊಡೆಯುವುದು ಮಾಡುತ್ತಿದ್ದಾಗ, ಚಾಸಾ.1 ನೇದ್ದವಳು, 1 ನೇ ಆರೋಪಿಗೆ ನೋಡಿಯು ನೊಡದಂತೆ, ತನ್ನ ಮನೆಯ ಕಡೆಗೆ ರಸ್ತೆಯಲ್ಲಿ ಹೋಗುತ್ತಿದ್ದಾಗ, 1 ನೇ ಆರೋಪಿಯು ಚಾಸಾ.1 ನೇದ್ದವಳ ಹಿಂದೆ ಬೆನ್ನು ಹತ್ತಿ ಹೋಗಿ, ಚಾಸಾ.1 ನೇದ್ದವಳ ಹೆಸರು ಕೂಗಿ ನಿಲ್ಲು ನಿನ್ನ ಜೊತೆ ಮಾತನಾಡುವುದು ಇದೆ ಎಂದು ಚೀರಿ ಹೇಳುತ್ತಿದ್ದಾಗ, ಚಾಸಾ.1 ನೇದ್ದವಳು ಹಾಗೆ ಮುಂದೆ ಮುಂದೆ ಹೋಗುತ್ತಿದ್ದಾಗ, 1 ನೇ ಆರೋಪಿಯು ಅವಳ ಹಿಂದೆಯೇ ಹೋಗಿ, ಚಾಸಾ.1 ನೇದ್ದವಳ ಕೈ ಹಿಡಿದು ಜಗ್ಗಿ, ಕೈಯಿಂದ ಕಪಾಳಕ್ಕೆ ಹೊಡೆದು, ಅಲ್ಲಿಯೇ ರೋಡಿನ ಪಕ್ಕದ ಕಂಟಿಯ ಕಡೆಗೆ ದರ ದರನೆ ಎಳೆದುಕೊಂಡು ಹೋಗುವಾಗ, ಚಾಸಾ.1 ನೇದ್ದವಳು ಚೀರಾಡಿದ್ದು, ರೋಡಿನಲ್ಲಿ ವಾಹನಗಳು ಬರುವುದು ನೋಡಿ 1 ನೇ ಆರೋಪಿಯು ಚಾಸಾ.1 ನೇದ್ದವಳಿಗೆ ಬಿಟ್ಟು ಹೋಗಿದ್ದು, 1 ನೇ ಆರೋಪಿಯು ಅಲ್ಲಿಂದ ಹೋಗುವಾಗ, ಚಾಸಾ.1 ನೇದ್ದವಳಿಗೆ, ಈ ವಿಷಯ ಮನೆಯಲ್ಲಿ ಹೇಳಿದರೆ ಚಾಸಾ.1 ಮತ್ತು ಅವರ ಮನೆಯವರಿಗೆ ಹೊಡೆದು ಖಲಾಸ್ ಮಾಡುವುದಾಗಿ ಜೀವದ ಬೇದರಿಕೆ ಹಾಕಿ ಓಡಿ ಹೋಗಿರುತ್ತಾನೆ. ಅಲ್ಲದೇ ಈ ಮುಂಚೆ ಒಂದು ವಾರದ ಹಿಂದೆ ಚಾಸಾ.1 ರವರು ಹೋಟೆಲದಿಂದ ಮನೆ ಕಡೆಗೆ ಹೋಗುವಾಗ 1 ನೇ ಆರೋಪಿಯ ಗೆಳೆಯ 2 ನೇ ಆರೋಪಿಯು ಪಿರ್ಯಾದಿ ಚಾಸಾ.1 ನೇದ್ದವಳ ಹಿಂದೆ ಹಿಂದೆ ಹೋಗಿ, ಚಾಸಾ.1 ನೇದ್ದವಳಿಗೆ ನಿನ್ನ ಮೊಬೈಲ್ ನಂಬರ್ ಕೊಡು, ಕುಮಾರ ನಿನ್ನ ಜೊತೆ

ಮಾತನಾಡುತ್ತಾನೆ ಎಂದು ಹೇಳಿ ಚಾಸಾ.1 ನೇದ್ದವಳಿಗೆ ತೊಂದರೆ ಕೊಟ್ಟಿರುವುದು ಇರುತ್ತದೆ. ಈ ನಿಟ್ಟಿನಲ್ಲಿ ಅಭಿಯೋಜಕರು ಪ್ರಾಸಾ.1 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿ ಎರಡು ದಾಖಲೆಗಳನ್ನು ನಿಪಿ.1 ಮತ್ತು 2 ಎಂದು ನಿಶಾನೆಕರಿಸಿಕೊಂಡಿರುತ್ತಾರೆ.

11. ಅಭಿಯೋಜನೆಯು ಚಾಸಾ.1 ರವರನ್ನು ಪ್ರಾಸಾ.1 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಪಿರ್ಯಾದಿದಾರರು ಆಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರು ತನಗೆ ಗೊತ್ತು ಎಂದು ನುಡಿದಿರುತ್ತಾರೆ. ಆರೋಪಿತರು ಮತ್ತು ತಮ್ಮ ಮಧ್ಯೆ ಗಲಾಟೆ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿತರು ಕೈಯಿಂದ ಹೊಡೆ ಬಡೆ ಮಾಡಿಲ್ಲ ಎಂದು ನುಡಿದಿರುತ್ತಾರೆ. 1 ನೇ ಆರೋಪಿ ಸಿಳ್ಳೆ ಹೊಡೆಯುವುದು ಕೈ ಸನ್ನೆ ಮಾಡುವುದು ಮತ್ತು ಹಿಂಬಾಲಿಸುವುದು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. 1 ಮತ್ತು 2 ನೇ ಆರೋಪಿತರು ತನಗೆ ಜೀವದ ಬೆದರಿಕೆ ಹಾಕಿಲ್ಲ ಎಂದು ನುಡಿದಿರುತ್ತಾರೆ. ತಮ್ಮ ಮತ್ತು ಆರೋಪಿತರ ಮಧ್ಯೆ ಬಾಯಿ ಮಾತಿನ ಜಗಳ ಆಗಿದ್ದರಿಂದ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಒಂದು ದಾಖಲೆಯ ಮೇಲೆ ತನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ.1 ಮತ್ತು 2 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಸಲಹೆಗಳನ್ನು ಸದರಿ ಸಾಕ್ಷಿಯು ನಿರಾಕರಿಸಿರುತ್ತಾರೆ.

12. ಪ್ರಾಸಾ.1 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಪ್ರಾಸಾ.1 ರವರು ಪಿರ್ಯಾದಿದಾರರು ಆಗಿದ್ದು ಸದರಿಯವರು ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿದ್ದಾರೆ. ಪ್ರತಿಕೂಲ

ಸಾಕ್ಷಿದಾರರಾಗಿ ಪರಿಣಮಿಸಿದ ನಂತರ ಅಭಿಯೋಜನೆಯು ಸದರಿ ಸಾಕ್ಷಿದಾರಳನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾದಂತಹ ಯಾವುದೇ ಅಂಶವನ್ನು ಹೊರತರಲು ಸಾಧ್ಯವಾಗಿಲ್ಲ ಹಾಗೂ ಪ್ರಾಸಾ.1 ರವರು ತಾನು ಮತ್ತು ಆರೋಪಿತರು ರಾಜಿ ಆಗಿದ್ದೇವೆ ಎನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ದೋಷಾರೋಪಣೆ ಪತ್ರದಲ್ಲಿ ಆರೋಪಿಸಿರುವಂತೆ ಆರೋಪಿತರ ವಿರುದ್ಧ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಈ ಪ್ರಕರಣದಲ್ಲಿ ಪ್ರಾಸಾ.1 ರವರು ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿದ್ದರಿಂದ ಇತರೆ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಮನಗಂಡು ಇತರೆ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸುವುದನ್ನು ಕೈಬಿಡಲಾಯಿತು. ಲಭ್ಯವಿರುವ ಸಾಕ್ಷ್ಯಾದಾರಗಳನ್ನು ಪರಿಶೀಲಿಸಲಾಗಿ ಅಭಿಯೋಜನೆಯು ಆರೋಪಿತರ ಮೇಲಿನ ದೋಷಾರೋಪಣೆಯನ್ನು ನ್ಯಾಯೋಚಿತ ರೀತಿಯಲ್ಲಿ ಮತ್ತು ಸಂಶಯತೀತವಾಗಿ ರುಜುವಾತುಪಡಿಸುವಲ್ಲಿ ವಿಫಲಗೊಂಡಿದ್ದರಿಂದ ಸದರಿ ಅನುಮಾನದ ಲಾಭವನ್ನು ಆರೋಪಿತರಿಗೆ ನೀಡಿ ಅವರ ಮೇಲೆ ಮಾಡಲಾದ ಆರೋಪಣೆಯಿಂದ ಮುಕ್ತಿಗೊಳಿಸಿ ಬಿಡುಗಡೆಗೊಳಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟು ಅಂಶ-1 ರಿಂದ 5 ಕ್ಕೆ ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

13. **ಅಂಶ-6 ಕ್ಕೆ:** ಅಂಶ-1 ರಿಂದ 5 ಕ್ಕೆ ಸಂಬಂಧಪಟ್ಟಂತೆ ಮಾಡಿರುವ ಚರ್ಚೆಯಿಂದ ಆರೋಪಿತರು ಅನುಮಾನದ ಲಾಭವನ್ನು ಪಡೆದು ಬಿಡುಗಡೆ ಹೊಂದಲು ಅರ್ಹರಿರುತ್ತಾರೆ ಎಂದು ಅಭಿಪ್ರಾಯಪಡಲಾಗಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**ಆದೇಶ**

ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 271(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತಾ ಕಲಂ.115(2), 74, 78, 79, 351(2) ಸಹ ಕಲಂ.3(5) ರ ಅಡಿಯಲ್ಲಿ ಮಾಡಿರುವ ಆಪಾದನೆಗಳಿಂದ ನಿರ್ದೋಷಿತರೆಂದು ಘೋಷಿಸಿ ಸದರಿ ಆರೋಪಗಳಿಂದ ದೋಷಮುಕ್ತರನ್ನಾಗಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು 06 ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದನ್ನು ನಾನು ಓದಿ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 19 ನೇ ಜೂನ್ ಮಾಹೆಯ 2026 ರಂದು ನನ್ನಿಂದ ಘೋಷಿಸಲಾಯಿತು).

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಜೇವರಗಿ.

**ಅನುಬಂಧ**

**ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ:**

ಪ್ರಾಸಾ-1 : ಫಾಮಿದಾ ತಂದೆ ಇಬ್ರಾಹಿಂ.

**ಅಭಿಯೋಜನೆ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಪಿ-1 | : | ದೂರು. |
| ನಿಪಿ-1(a) | : | ಫ್ರಾಸಾ.1 ರವರ ಸಹಿ. |
| ನಿಪಿ-2 | : | ಸ್ಥಳ ಪಂಚನಾಮೆ. |
| ನಿಪಿ-2(a) | : | ಫ್ರಾಸಾ.1 ರವರ ಸಹಿ. |

**ಅಭಿಯೋಜನೆ ಪರ ನಿಷಾನೆ ಮಾಡಲಾದ ಮುದ್ದೇ ಮಾಲುಗಳ ಪಟ್ಟಿಃ**

-ಇಲ್ಲ-

**ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿಃ**

-ಇಲ್ಲ-

**ಆರೋಪಿತರ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿಃ**

-ಇಲ್ಲ-

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಜೇವರಗಿ.